# ರಂಗಭೂಮಿ ಮತ್ತು ಸಮಾಜ ಸುಧಾರಣೆ

ಗೀತಾ ಜೈನ್*

DOI: https://doi.org/10.5281/zenodo.22107605

**ABSTRACT**

ಮಾನವನ ಬದುಕಿನ ಏರಿಳಿತಗಳನ್ನು ಹಾಗೂ ಸಮಾಜದ ಅಂಕುಡೊಂಕುಗಳನ್ನು ಕನ್ನಡಿಯಂತೆ ಪ್ರತಿಬಿಂಬಿಸುವ ರಂಗಭೂಮಿಯು ಕೇವಲ ಮನರಂಜನೆಯ ವೇದಿಕೆಯಾಗಿರದೆ, ಪ್ರಬಲ ಲೋಕಶಿಕ್ಷಣದ ಮಾಧ್ಯಮವಾಗಿದೆ. ಪ್ರಾಚೀನ ನಾಟ್ಯಶಾಸ್ತ್ರದ ತಳಹದಿಯಿಂದ ಬೆಳೆದುಬಂದ ಯಕ್ಷಗಾನ, ಬಯಲಾಟ ಮತ್ತು ಬೀದಿನಾಟಕಗಳಂತಹ ಪ್ರಕಾರಗಳು ಕಾಲಕಾಲಕ್ಕೆ ಸಮಾಜದ ಪಿಡುಗುಗಳ ವಿರುದ್ಧ ಜಾಗೃತಿ ಮೂಡಿಸುತ್ತಲೇ ಬಂದಿವೆ. ವಿಶೇಷವಾಗಿ ಇಂದಿನ ಯುವಜನತೆಗೆ, ಕೇವಲ ಪಠ್ಯದ ಓದಿಗಿಂತ ರಂಗಕಲೆಯ ಪ್ರಾಯೋಗಿಕ ಒಡನಾಟವು ಸಾಮಾಜಿಕ ಜವಾಬ್ದಾರಿ, ನೈತಿಕ ಮೌಲ್ಯ ಮತ್ತು ಮಾನವೀಯತೆಯನ್ನು ಅತ್ಯಂತ ಆಳವಾಗಿ ಕಲಿಸುತ್ತದೆ. ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಇಂದಿನ ಪರಿಸರ ಸಂರಕ್ಷಣೆ ಹಾಗೂ ವ್ಯಸನಮುಕ್ತ ಸಮಾಜ ನಿರ್ಮಾಣದವರೆಗೆ ರಂಗಭೂಮಿಯ ಕೊಡುಗೆ ಅಪಾರ. ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿರುವ 'ಜೆನ್-ಝೀ' ಪೀಳಿಗೆಯು ಸುಸ್ಥಿರ ಹಾಗೂ ಸ್ವಸ್ಥ ಸಮಾಜವನ್ನು ಕಟ್ಟಲು, ಅವರಲ್ಲಿ ಆತ್ಮವಿಶ್ವಾಸ ತುಂಬಿ ಸಕಾರಾತ್ಮಕ ಬದಲಾವಣೆ ತರುವ ಅತ್ಯುತ್ತಮ ಜ್ಞಾನದ ಕೊಂಡಿಯಾಗಿ ರಂಗಭೂಮಿ ಕಾರ್ಯನಿರ್ವಹಿಸುತ್ತಿದೆ.

**KEYWORDS:** ರಂಗಭೂಮಿ, ಸಮಾಜ ಸುಧಾರಣೆ, ಲೋಕಶಿಕ್ಷಣ, ಯುವಪೀಳಿಗೆ, ಸಾಮಾಜಿಕ ಜಾಗೃತಿ.

* **ಗೀತಾ ಜೈನ್,** ಅತಿಥಿ ಉಪನ್ಯಾಸಕಿ, ವಿಶ್ವವಿದ್ಯಾನಿಲಯ ಕಾಲೇಜು, (ಸಂಧ್ಯಾ ಕಾರ್ಯಕ್ರಮ), ಮಂಗಳೂರು.

**ಪೀಠಿಕೆ:**

ಜೀವನವೆಂಬ ನಾಟಕದ ರಂಗಭೂಮಿಯೇ ಸಮಾಜ. ಆ ಸಮಾಜ ನಿತ್ಯ ನಿರಂತರ ವಿವಿಧ ಪಾತ್ರಧಾರಿಗಳ ಮೂಲಕ ಬದಲಾವಣೆಗೆ ಒಳಗಾಗುತ್ತಾ ಒಳಿತು ಕೆಡುಕುಗಳನ್ನು ತನ್ನೊಡಲಿನಲ್ಲಿ ಅರಗಿಸಿಕೊಳ್ಳುತ್ತಾ, ಸುಧಾರಿತ ಸಮಾಜದ ಆಶಯದೊಂದಿಗೆ ಸಮಯದ ತಾಳಕ್ಕೆ ಹೆಜ್ಜೆಹಾಕುತ್ತಾ ಮುಂದುವರಿಯುತ್ತದೆ. ಜೀವ ಸಂಕುಲದ ನಡುವೆ ನಡೆಯುವ, ಅನುಭವಿಸುವ ಸಂಗತಿಗಳಲ್ಲಿ ಒಳ್ಳೆಯದು–ಕೆಟ್ಟದು, ಸಮ–ಬೆಸ, ಸಿಹಿ–ಕಹಿ, ಒಳಿತು–ಕೆಡುಕುಗಳಿದ್ದು, ಇವೆಲ್ಲ ನಾಣ್ಯದ ಎರಡು ಮುಖಗಳಂತೆ. ಬಯಸಿಯೋ ಬಯಸದೆಯೋ ಸತತ ಜಗತ್ತಿನಲ್ಲಿ ಘಟಿಸುತ್ತಲೇ ಇರುತ್ತದೆ. ಸಮದಿಂದ ಸಮಾಜಕ್ಕೆ ಒಳ್ಳೆಯದಾದರೆ ಬೆಸದಿಂದ ಬೇಸರವಾಗಿ ಸಮಾಜಕ್ಕೆ ಆಪತ್ತು ತಂದುಕೊಡುತ್ತದೆ. ಅದು ಮನುಷ್ಯನ ದುರಾಡಳಿತದಿಂದಲೋ, ನಡವಳಿಕೆಯಿಂದಲೋ, ಅಜ್ಞಾನದಿಂದಲೋ ಬಂದಿರಬಹುದು. ಅಂತಹ ಆಪತ್ತುಗಳು ಕೆಲವೊಮ್ಮೆ ಇಡೀ ಸಮಾಜದ ಅವನತಿಗೆ ಕಾರಣವಾಗಬಹುದು. ಈ ಆಪತ್ತಿನಿಂದ ದೂರ ಸರಿಯಲು, ಮನಮುಟ್ಟುವಂತೆ ಅರಿಯಲು ರಂಗಭೂಮಿಯು ಪ್ರಮುಖ ಸಾಧನವಾಗಿದೆ. ಇಂತಹ ರಂಗಭೂಮಿ ಜ್ಞಾನದ ಕೊಂಡಿಯಂತೆ ಕಾಲಕಾಲಕ್ಕೆ ಅದೆಷ್ಟೋ ಶತಮಾನಗಳಿಂದ ಸಾಮಾಜಿಕ ಬದ್ಧತೆಯ ಅರಿವನ್ನು ಉಳಿಸಿಕೊಂಡು ಬಂದು, ಜೀವನಶಿಕ್ಷಣದ ಮಾಧ್ಯಮವಾಗಿಯೂ ಸರ್ವಕಾಲದಲ್ಲೂ ಮಾನವ ಸಮಾಜದ ಉನ್ನತಿಯನ್ನು ಪ್ರೇರೇಪಿಸುತ್ತಾ ಸುಧಾರಣಾ ಹಾದಿಯಲ್ಲಿ ಸಾಗಿದೆ.

**ವಿಶ್ಲೇಷಣೆ:**

“ಕಲೆಯು ಜಗತ್ತನ್ನು ಉತ್ತಮವಾಗಿ ಗ್ರಹಿಸುವ ಚೌಕಟ್ಟು”. ನೋಡುವ ಕಣ್ಣು, ಕೇಳಿಸುವ ಕಿವಿ, ಮಾತನಾಡುವ ಬಾಯಿ, ರುಚಿ ತಿಳಿಸುವ ನಾಲಗೆ ಅದೇ ರೀತಿ ಸ್ಪರ್ಶದ ಅರಿವು ಸೂಚಿಸುವ ಚರ್ಮ ಹೀಗೆ ಪಂಚೇಂದ್ರಿಯಗಳು ಮನುಷ್ಯನನ್ನು ಸಕಾಲದಲ್ಲಿ ಹೇಗೆ ಎಚ್ಚರಿಸಿ ಸದೃಢನನ್ನಾಗಿ ಮಾಡುತ್ತದೋ, ಅದೇ ರೀತಿ ಸಮಾಜದ ಅಂಕುಡೊಂಕುಗಳ ದೃಶ್ಯವನ್ನು ಅರಿತು ಅದನ್ನು ಅನುಕರಿಸಿ ಹಿತವಾದದನ್ನೇ ಪ್ರವಹಿಸಿ ಸರಿದೂಗಿಸುವ ಮಾಧ್ಯಮವೇ ರಂಗಭೂಮಿ. ಸಮಾಜದಲ್ಲಿ ನಡೆದ, ನಡೆಯುತ್ತಿರುವ ಹಾಗೂ ಮುಂದಕ್ಕೆ ನಡೆಯುವ ವಿಚಾರಗಳ ಒಳನೋಟವನ್ನು ಮಾನವನು ಕರಗತ ಮಾಡಿಕೊಂಡ ಕೌಶಲ್ಯ, ಕಲೆಗಳ ಮೂಲಕ ಪ್ರೇಕ್ಷಕರ ಮುಂದೆ ಕನ್ನಡಿಯಂತೆ ತೋರ್ಪಡಿಸಿ ಸಮಾಜವನ್ನು ಅಂದವಾಗಿಸುವುದು ರಂಗಭೂಮಿಯ ಕಾಯಕ. ಸಾಮಾಜಿಕ ಘಟಕವಾದ ರಂಗಭೂಮಿ ರಂಗಾಂಶಗಳ ಮೂಲಕ ಸಂವಹನವನ್ನು ಕಲ್ಪಿಸುತ್ತಾ ಮನರಂಜನೆಯ ಜೊತೆಗೆ ಇಡೀ ಜನಸಮುದಾಯಕ್ಕೆ ಲೋಕಶಿಕ್ಷಣ ಹಾಗೂ ನೀತಿಶಿಕ್ಷಣವನ್ನು ನೀಡುತ್ತಾ ಸುಧಾರಣಾ ಹಾದಿಯನ್ನು ತಿಳಿಸುತ್ತದೆ. ಕಥನಸಾಹಿತ್ಯವು ರಂಗಭೂಮಿಯ ವಸ್ತು. ಕಥೆಗೊಂದು ಭಾವನಾತ್ಮಕ ಶಕ್ತಿ ಇದೆ. ಅದು ಪೌರಾಣಿಕವಾಗಿರಬಹುದು, ಅಥವಾ ಆಧುನಿಕ ಆಗಿರಬಹುದು, ಒಂದು ಒಳ್ಳೆಯ ಕಥೆ ಪ್ರೇಕ್ಷಕನ ಮನಸ್ಸಿನಲ್ಲಿ ಅಚ್ಚೊತ್ತಿ ಹೃದಯವನ್ನು ತಲುಪುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಪಾತ್ರಗಳೊಂದಿಗೆ, ಅಳುತ್ತೇವೆ, ನಗುತ್ತೇವೆ, ಅವರೊಂದಿಗೆ ಹೋರಾಡುತ್ತೇವೆ. ತಪ್ಪು ಹಾಗೂ ಅದರಿಂದಾಗುವ ಪರಿಣಾಮವನ್ನು ಪ್ರತ್ಯಕ್ಷವಾಗಿ ಪಾತ್ರಗಳ ಮೂಲಕ ತೋರಿಸುತ್ತಾ ಪ್ರೇಕ್ಷಕನನ್ನು ಎಚ್ಚರಿಸುತ್ತದೆ. ಹೀಗಾಗಿ ರಂಗಭೂಮಿಗೆ ಅದ್ಭುತವಾದ ಶಕ್ತಿಯಿದೆ ಎಂದು ಹೇಳಬಹುದು.

ಒಂದು ಸಮಾಜವು ಜೀವ ಸಂಕುಲ ನೆಮ್ಮದಿಯಿಂದ ಬದುಕಲು ಪೂರಕವಾಗಿರಬೇಕು. ಆದರೆ ಪ್ರತಿ ಕಾಲದಲ್ಲೂ ಒಳ್ಳೆಯವರು ಕೆಟ್ಟವರು ಇರುತ್ತಾರೆ. ಹಾಗಾಗಿ ಕಾಲಕಾಲಕ್ಕೆ

ಹೊಸಹೊಸ ಸಮಾಜ ಸುಧಾರಣಾ ಮಾರ್ಗಗಳನ್ನು ಮನುಷ್ಯ ಅಥವಾ ಕೆಲವೊಮ್ಮೆ ಪ್ರಕೃತಿಯೇ ಕಂಡುಕೊಂಡು ಪರಿಹಾರವನ್ನು ಪಡೆಯುತ್ತದೆ. ಅವುಗಳಲ್ಲಿ ಒಂದು ರಂಗಭೂಮಿ. ಮನರಂಜಿಸಲು ಇದ್ದಂತಹ ರಂಗಭೂಮಿ ಸಮಾಜೋದ್ಧಾರ ಕಾಯಕವನ್ನು ತಂತ್ರವಾಗಿಸಿಕೊಂಡು ಸಮಾಜದಲ್ಲಿ ಸ್ಥಾನವನ್ನು ಪಡೆದುಕೊಂಡಿದೆ. ನಿಘಂಟಿನ ಪ್ರಕಾರ ರಂಗಭೂಮಿ ಎಂದರೆ 'ನಟರು ಪ್ರೇಕ್ಷಕರ ಎದುರು ನೇರವಾಗಿ ನಾಟಕ ಅಥವಾ ಕಲಾ ಪ್ರದರ್ಶನವನ್ನು ನೀಡುವ ಒಂದು ಜೀವಂತ ಕಲಾ ಪ್ರಕಾರ'. ಪ್ರತಿ ಪ್ರದರ್ಶನವೂ ಒಂದಲ್ಲ ಒಂದು ರೀತಿಯ ಹಿತ ಸಂದೇಶವನ್ನು ಹೊತ್ತುಕೊಂಡೇ ಪ್ರದರ್ಶನಗೊಳ್ಳುತ್ತದೆ. ಹಾಗಾಗಿ ಕಲಾವಿದರು ಹಾಗೂ ಪ್ರೇಕ್ಷಕರ ಸಮೂಹ ಒಂದೇ ಕಡೆ ಸೇರಿ ನೇರ ಸಂಬಂಧವನ್ನು ಜೋಡಿಸುತ್ತಾ ಸಮಾಜದ ಒಳಿತಿಗಾಗಿ ರಂಗಭೂಮಿ ದುಡಿಯುತ್ತದೆ.

ಜೀವಿಸುವ ಪ್ರತಿ ಜೀವಿಗಳಲ್ಲೂ ನಾಟಕೀಯತೆಯ ಕಲೆ ಅಂತರ್ಗತವಾದುದು. ಹುಟ್ಟಿದ ಮಗುವಿನಿಂದ ಹಿಡಿದು ಹಣ್ಣಾದ ಮುದುಕನವರೆಗೂ ಅಷ್ಟೇ ಏತಕ್ಕೆ ಪ್ರಾಣಿ ಪಕ್ಷಿಗಳು ಬದುಕಿಗಾಗಿ, ಆಸೆ ಆಕಾಂಕ್ಷೆಗಳಿಗಾಗಿ ನಟಿಸುತ್ತದೆ. ಮಾನವ ಸಮಾಜ ಸಾವಿರಾರು ವರ್ಷಗಳ ಹಿಂದೆಯೇ ಪ್ರಕೃತಿಯನ್ನು ಅರಿತು, ತನ್ನ ಬೇಡಿಕೆಗಳ ಈಡೇರಿಕೆಗಾಗಿ ಆಂಗಿಕ ಚಲನೆ, ಸಂಕೇತಗಳ ಬಳಕೆ, ಶಾಬ್ದಿಕ ಭಾಷಾ ಸಂವಹನದ ಮೂಲಕ ಕಾಡಿನಿಂದ ನಾಡಿಗೆ, ಪ್ರಕೃತಿಯಿಂದ ಸಂಸ್ಕೃತಿಯೆಡೆಗೆ ಸಾಗಿ ಬಂದು ನಾಗರಿಕ ಪ್ರಜ್ಞೆಯು ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಹೊಸ ಹೊಸ ವಿಚಾರಗಳನ್ನು ಕಂಡುಕೊಳ್ಳುವಲ್ಲಿ ಪ್ರೇರಣೆಯಾಯಿತು. ಸಾಗಿ ಬಂದ ಜೀವನದಲ್ಲಿ ಆನಂದಕ್ಕೋ ಅಥವಾ ಆಚರಣೆಗೋ ನಾಟಕೀಯತೆ ಉಗಮವಾಗಿ ಅನುಭವದ ಪ್ರಸಂಗಗಳನ್ನು ಅನುಕರಣೆಯ ರೂಪದಲ್ಲಿ ತಿಳಿಸಿ, ಪ್ರದರ್ಶಿಸಿ ರಂಗಪ್ರಜ್ಞೆಯ ರೂಪವನ್ನು ಪಡೆಯಿತು. ಸಾಮೂಹಿಕ ರಂಜನಾ ಸಾಮರ್ಥ್ಯವನ್ನು ಹೊಂದಿರುವ ಈ ರಂಗಭೂಮಿ ಕೇವಲ ಮನರಂಜನೆ ಅಥವಾ ಪ್ರಚಾರದ ಸಾಧನವಾಗದೆ ಮನುಷ್ಯನ ಜ್ಞಾನ–ಕೌಶಲ್ಯದ ಅಭಿವ್ಯಕ್ತಿಯಾಗಿದ್ದು, ತನ್ನ ಕಲಾತ್ಮಕತೆಯನ್ನು ಪ್ರದರ್ಶಿಸಿ ಸಾಮಾಜಿಕ ಮೌಲ್ಯಗಳನ್ನು ತೋರಿಸಿಕೊಟ್ಟು, ಸುಲಭವಾಗಿ ನೋಡುಗರ ಸೂಕ್ಷ್ಮಭಾವನೆಗಳನ್ನು ಕೆದಕಿ, ಪ್ರತಿಕ್ರಿಯೆ ಹುಟ್ಟಿಸುವ ಸಾಧನವಾಗಿದೆ. ಹಾಗಾಗಿ ಹಿಂದಿನ ಕಾಲದಿಂದಲೂ ಈ ಪ್ರಕಾರ ಪರಂಪರೆಯಲ್ಲಿ ವಿಸ್ತಾರವಾಗಿ ಬೆಳೆದುಬಂದಿದೆ. ವೇದಿಕೆಯ ಬೆಳಕು, ನೃತ್ಯ, ಸಂಗೀತ, ತನ್ನ ವೇಷಭೂಷಣ ನಟನೆ, ಸಂಭಾಷಣೆಯ ಮೂಲಕ ಕಲಾವಿದರ ಮತ್ತು ಪ್ರೇಕ್ಷಕರ ನಡುವೆ ಭಾವನಾತ್ಮಕ ಸಂಪರ್ಕವನ್ನು ಕಲ್ಪಿಸಿಕೊಡುತ್ತಾ ಬೇರೆ ಬೇರೆ ಪ್ರಕಾರಗಳಲ್ಲಿ ಗುರುತಿಸಿಕೊಂಡಿದೆ. ಹಾಗಾಗಿ ರಂಗಭೂಮಿಯು ಒಂದು ಸಂವಹನ ಮಾಧ್ಯಮವಾಗಿದ್ದು, ಸಮಾಜದೊಂದಿಗೆ ಗುಣಾತ್ಮಕ ಪರಿಣಾಮವನ್ನೇ ಬೀರಿದೆ. ಮುಖ್ಯವಾಗಿ ನಟನಾ ತಂತ್ರದ ಮೂಲಕ ಕಾಲಕಾಲಕ್ಕೆ ಸಮಕಾಲೀನ ಅವಶ್ಯಕತೆಗಳ ಅರಿವನ್ನು ಮೂಡಿಸುತ್ತಾ ಸಮಾಜದ ಸಮಸ್ಯೆಗಳಿಗೆ ಸಮರ್ಥ ಸ್ಪಂದನೆ ನೀಡಬಲ್ಲ ಜೀವಂತ ಸಂಕೀರ್ಣಕಲೆಯಾಗಿದೆ. ಇಂತಹ ವಿಚಾರಗಳ ಬಗ್ಗೆ ಪ್ರಾಚೀನ ಭಾರತೀಯ ಸಾಹಿತ್ಯಗಳಲ್ಲೇ ಉಲ್ಲೇಖಗೊಂಡಿದೆ. ಕ್ರಿ.ಶ. 2ನೇ ಶತಮಾನದಲ್ಲಿ ರಚನೆಯಾದ ಮುಖ್ಯವಾಗಿ ರಂಗಕಲೆಯಾದ ನೃತ್ಯ, ಸಂಗೀತ, ಸಾಹಿತ್ಯ ಹೀಗೆ ಎಲ್ಲವನ್ನು ಒಳಗೊಂಡ ಅತ್ಯಂತ ಪ್ರಾಚೀನ ಗ್ರಂಥ ಎಂದರೆ ಭರತಮುನಿಯ ನಾಟ್ಯಶಾಸ್ತ್ರ. ಆ ಗ್ರಂಥದಲ್ಲಿ ಭರತಮುನಿಯು ನಾಟ್ಯದ ಅಭಿನಯ, ಆಂಗಿಕ, ವಾಚಿಕ, ಆಹಾರ್ಯ, ನಾಟ್ಯಮಂದಿರ ಹಾಗೂ ಪ್ರೇಕ್ಷಕವರ್ಗ ಹೇಗಿರಬೇಕೆಂದು ವಿವರಿಸುತ್ತಾನೆ. ಅಷ್ಟೇ ಅಲ್ಲದೆ ಕೆಡುಕಿನ ಬಗ್ಗೆ ಪ್ರಸ್ತಾಪ ಮಾಡುತ್ತಾ, ಸತ್ಯ–ಧರ್ಮದೊಂದಿಗೆ ಸಾಮಾಜಿಕವಾಗಿ ಜನಮಾನಸದಲ್ಲಿ ಒಳಿತನ್ನುಂಟು ಮಾಡಬೇಕಾದ ಪ್ರಯತ್ನದಲ್ಲಿ ರಂಗಭೂಮಿ ಹೇಗಿರಬೇಕು, ಅದರ ಪಾತ್ರವೇನು

ಎಂಬುದರ ಬಗ್ಗೆ ಸ್ಥೂಲವಾಗಿ ಹೇಳಿದ್ದಾರೆ. (ಶೋಧಗಂಗಾ – ರಂಗಭೂಮಿಯ ಮೂಲಕ ಶಿಕ್ಷಣದ ಮೌಲ್ಯವರ್ಧನೆ – ಅಂಬರೀಶ ಆರ್.ಜಿ, ಪಿ.ಎಚ್.ಡಿ ಮಹಾಪ್ರಬಂಧ 2014 ಪುಟ ಸಂಖ್ಯೆ: 124). ಹೀಗೆ ಉತ್ಕೃಷ್ಟವಾದ ಸಾಹಿತ್ಯ, ಸಂಸ್ಕೃತಿ, ಭಾಷೆ, ಕಲೆ, ಇತಿಹಾಸ, ಜ್ಞಾನ ಪರಂಪರೆಯನ್ನು ಹೊಂದಿರುವ ನಮ್ಮ ನೆಲ ಇವನ್ನೆಲ್ಲವೂ ವಸ್ತುವಾಗಿಸಿಕೊಂಡು ಅವುಗಳನ್ನು ಉಳಿಸುವ, ಬೆಳೆಸುವ ದೃಷ್ಟಿಯಿಂದ ಹಳೆಯ ಕಾಲ, ನಡುಗಾಲ, ವಸಾಹತುಕಾಲ ಹಾಗೂ ಹೊಸಕಾಲದಲ್ಲೂ ರಂಗಭೂಮಿಯು ಸಮೃದ್ಧವಾಗಿ ಬೆಳೆದು ಬಂದಿದೆ. ಒಟ್ಟಿನಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿ ಉಳಿಸಿಕೊಂಡು ಬಂದಿದೆ ಎನ್ನಬಹುದು.

ಇಂತಹ ರಂಗಭೂಮಿಯ ಸಾಂಸ್ಕೃತಿಕ ಜಗತ್ತು ಹಲವು ಆಟ–ಕೂಟಗಳ ಪ್ರತಿಫಲವಾಗಿ ಜನಪದ ರಂಗಭೂಮಿ, ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಯಂತಹ ಪ್ರಕಾರಗಳನ್ನು ಹೊಂದಿದ್ದು, ಮುಖ್ಯವಾಗಿ ಜನಪದ ರಂಗಭೂಮಿಯಲ್ಲಿ ಬಯಲಾಟ, ಯಕ್ಷಗಾನ, ಗೊಂಬೆಯಾಟ, ದೈವಾರಾಧನೆಗಳ ರೂಪದಲ್ಲಿ ಪ್ರದರ್ಶನ ಗೊಂಡರೆ, ವೃತ್ತಿ ರಂಗಭೂಮಿಯಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಕಂಪನಿ ನಾಟಕದ ಮೂಲಕ ಕಲಾವಿದರ ಬದುಕಿನ ನಿರ್ವಹಣೆಗೆ ದಾರಿ ತೋರಿದರೆ ಆಧುನಿಕ ನಾಟಕಗಳು, ಬೀದಿ ನಾಟಕಗಳು ಪ್ರಾಯೋಗಿಕತೆಯ ಮೂಲಕ ಆಧುನಿಕ ಸೊಗಡನ್ನು ನೀಡುತ್ತದೆ.

**ಶಿಕ್ಷಣದಲ್ಲಿ ರಂಗಭೂಮಿಯ ಪಾತ್ರ:**

ಎಳವೆಯಲ್ಲಿ ಮಕ್ಕಳು ತರಗತಿ ಪಠ್ಯಕ್ಕಿಂತಲೂ ವೈವಿಧ್ಯಮಯವಿರುವ ಅಂದರೆ ಕುಣಿತ, ಸಂಭಾಷಣೆ, ವೇಷಭೂಷಣ, ವಾದನ ಹೀಗೆ ವಿಶಿಷ್ಟ, ವಿಭಿನ್ನವಾಗಿರುವಂತಹ ಸಂಗತಿಗಳಿಗೆ ಹೆಚ್ಚು ಆಸಕ್ತರಾಗಿರುತ್ತಾರೆ. ರಂಗಭೂಮಿ ಇವನ್ನೆಲ್ಲ ಒಳಗೊಂಡಿರುವ ಏಕೈಕ ಕಲಾ ಪ್ರಕಾರ. ಆಧುನಿಕ ಕಾಲದಲ್ಲಿ ಯುವಜನತೆಯು ಒಳ್ಳೆಯ ದಾರಿಯಲ್ಲಿ ಸಾಗಲು ಹಾಗೂ ಕೆಟ್ಟದಾರಿಯ ಮೂಲಕ ದಿಕ್ಕು ತಪ್ಪಿಸಲು ಹಲವಾರು ಮಾರ್ಗಗಳಿವೆ. ಯುವಜನತೆಯೂ ಹೆಚ್ಚು ಯೋಚಿಸದೆ ಸೂಕ್ತ ಮಾರ್ಗಗಳ ಬಗ್ಗೆ ತಿಳಿಯದೆ ಹೆಚ್ಚಿನ ಸಂದರ್ಭಗಳಲ್ಲಿ ಎಡವಿ ಸಂಕಷ್ಟಕ್ಕೆ ಸಿಲುಕಿಕೊಂಡು ಜೀವನ ಪರ್ಯಂತ ಪೇಚಾಡುವುದಿದೆ. ಸರಿಯಾದ ಸಮಯದಲ್ಲಿ ಮಾರ್ಗದರ್ಶನ ನೀಡಿದಲ್ಲಿ ಅಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಅಂತಹ ಮಾರ್ಗದರ್ಶನ ನೀಡಲು ರಂಗಭೂಮಿಯು ಸರಿಯಾದ ಸಾಧನ. "ಅಭಿನಯ, ಭಾವಾಭಿವ್ಯಕ್ತಿ, ಭಾಷೆ ಇತ್ಯಾದಿಗಳ ಮೂಲಕ ಮನಸ್ಸಿನ ವಿವಿಧ ಹೊರದಾರಿಗಳಿಗೆ ಸಹಜತೆಯನ್ನು ಒದಗಿಸುವ ನಾಟಕ ಪ್ರಾಚೀನ ಕಾಲದಿಂದಲೂ ಮನೋ ಜಗತ್ತನ್ನು ಗೆಲ್ಲುತ್ತ ಸಾಮಾಜಿಕ ಕಳಕಳಿಯ ಪ್ರಚೋದಕವಾಗಿದ್ದು, ಅದನ್ನು ಬೆಳೆಸುತ್ತ ಬಂದಿದೆ". (ಪಟ್ಟಣಶೆಟ್ಟಿ ಸಿದ್ದಲಿಂಗ 1995 ಪುಟ 56)

**ಯುವ ಸಮೂಹದಿಂದ ಸಮಾಜ ಸುಧಾರಣೆ:**

ಸಮಾಜದ ಸೊತ್ತು ಯುವಪೀಳಿಗೆ. ಅವರೇ ಮುಂದಿನ ಸ್ವಸ್ಥಸಮಾಜವನ್ನು ನಿರ್ಮಾಣ ಮಾಡುವವರು. ಸಕಲವೂ ಅತ್ಯಂತ ವೇಗಗತಿಯಲ್ಲಿ ಬದಲಾಗುತ್ತಿರುವ ಈ ಕಾಲದಲ್ಲಿ ಸ್ವಸ್ಥ ಸಮಾಜಕ್ಕೆ ಸುಸ್ಥಿರ ವಿದ್ಯಾರ್ಥಿಗಳ ಸಮೂಹ ನಿರ್ಮಾಣವಾಗಲೇಬೇಕು. ಕಲಿಕೆಯ ಸಮಯದಲ್ಲೇ ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ರಂಗಭೂಮಿ ಸಹಾಯಕವಾಗಿದ್ದು, ವಿದ್ಯಾರ್ಥಿಗಳ ಬೆಳವಣಿಗೆಗೆ ಅದು ಪೂರಕವಾಗಿದೆ. ಈಗಿನ ವಿದ್ಯಾರ್ಥಿಗಳು ಓದುವುದಕ್ಕಿಂತಲೂ ಕೇಳುವ, ನೋಡುವ

ಪ್ರವೃತ್ತಿಯಲ್ಲಿ ಹೆಚ್ಚು ಆಸಕ್ತಿ ಹೊಂದಿದವರು. ರಂಗಭೂಮಿಯು ಮನರಂಜನೆ ಮತ್ತು ಶಿಕ್ಷಣ ನೀಡುವುದಲ್ಲದೆ ವಿವಿಧ ಕಲಾ ಪ್ರಕಾರಗಳನ್ನು ಸಂಯೋಜಿಸಿ ತನ್ನ ನೇರ ಪ್ರೇಕ್ಷಕರಿಗೆ ನಿಜವಾದ ರಂಗ ಅನುಭವವನ್ನು ನೀಡುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ರಂಗವೇದಿಕೆಗೆ ಬರಬೇಕು.

ಯಕ್ಷಗಾನ, ತಾಳಮದ್ದಳೆ, ನಾಟಕ, ಬೀದಿನಾಟಕ ಕರಾವಳಿಯ ಪ್ರಸಿದ್ಧ ರಂಗಕಲೆಯಾಗಿದ್ದು, ಪುರಾಣ, ಇತಿಹಾಸ, ಸಾಮಾಜಿಕ ಹಾಗೂ ಧಾರ್ಮಿಕ ಕಥೆಗಳ ಮೂಲಕ ಸತ್ಯ, ನ್ಯಾಯ, ನೀತಿ ಹಾಗೂ ಮಾನವೀಯ ಮೌಲ್ಯಗಳನ್ನು ಸಮಕಾಲೀನ ಉದಾಹರಣೆಯೊಂದಿಗೆ ಪ್ರಸ್ತುತ ಪಡಿಸುತ್ತಾ ಪ್ರೇಕ್ಷಕರ ಮನದಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡುತ್ತದೆ. ವಿಮರ್ಶಾತ್ಮಕವಾಗಿ ಯೋಚಿಸುವಂತೆ ಕೆಲವೊಮ್ಮೆ ನಮ್ಮ ನಮ್ಮ ಸ್ವಂತ ನಂಬಿಕೆಗಳನ್ನು ಪ್ರಶ್ನಿಸುವಂತೆ ಸಹ ಒತ್ತಾಯಿಸುತ್ತದೆ. ರಂಗಭೂಮಿಯಲ್ಲಿ ಹಾಸ್ಯವಿದೆ, ವ್ಯಂಗ್ಯವಿದೆ ನೇರವಾಗಿ ವಿರೋಧಿಸಲು ಅಸಾಧ್ಯವಾದಾಗ ರಂಗಭೂಮಿಯು ಅದಕ್ಕೆ ವೇದಿಕೆಯನ್ನು ಕಲ್ಪಿಸಿಕೊಡುತ್ತದೆ. ವೇದಿಕೆಯ ಮೇಲೆ ಜನಸಾಮಾನ್ಯರ ಆಡುಭಾಷೆಯಲ್ಲಿ ಪ್ರಯೋಗಿಸಿದರೆ ಅದು ಹೆಚ್ಚು ಪರಿಣಾಮವನ್ನು ಬೀರುತ್ತದೆ. ಹಾಗಾಗಿಯೇ ವಸಾಹತುಶಾಹಿ ಕಾಲದಲ್ಲಿ ಸ್ವಾತಂತ್ರ್ಯವನ್ನು ಪಡೆಯಲು ಆಗಿನ ಕಾಲದ ರಂಗಭೂಮಿ ಕಲಾವಿದರು ನಾಟಕಗಳ ಮೂಲಕ ಬ್ರಿಟಿಷ್ ಆಡಳಿತವನ್ನು ಟೀಕಿಸುವ, ಒಗ್ಗಟ್ಟಿಗಾಗಿ ಏಕತೆಯನ್ನು ಮೂಡಿಸುವ ರೂಪಕಗಳನ್ನು ಚಳುವಳಿಯ ಸಮಯದಲ್ಲಿ ಮಾಡುತ್ತಿದ್ದರು. ಹೋರಾಟಗಾರರು ಒಗ್ಗೂಡುವಲ್ಲಿ, ಸ್ವಾತಂತ್ರವನ್ನು ಪಡೆಯುವಲ್ಲಿ ರಂಗಭೂಮಿಯು ಸಹಾಯಕವಾಗಿದೆ. ಸ್ವಾತಂತ್ರ್ಯ ಬಂದ ನಂತರದಲ್ಲಿ ಸಾಮಾಜಿಕ ಪಿಡುಗುಗಳಾದ ಜಾತಿ ತಾರತಮ್ಯ, ಲಿಂಗ ಪಕ್ಷಪಾತ, ಬಡತನ, ಅನಕ್ಷರತೆ, ಧಾರ್ಮಿಕತೆ, ಪರಿಸರ ಕಾಳಜಿಯಂತಹ ಮಹತ್ವದ ವಿಚಾರಗಳ ಬಗ್ಗೆ ಜಾಗೃತಿ ಮೂಡಿಸುತ್ತಾ ಸಾಮಾಜಿಕ ಸುಧಾರಣಾ ಕಾರ್ಯದಲ್ಲಿ ತೊಡಗಿತು. ಹಾಗಾಗಿ ಆ ಕಾಲದಲ್ಲಿ ಹಲವು ಯಕ್ಷಗಾನ ಪ್ರಸಂಗಗಳು, ನಾಟಕಗಳು ರಂಗಭೂಮಿಯಲ್ಲಿ ಪ್ರದರ್ಶನ ಹಾಗೂ ಸಾಹಿತ್ಯದ ಮೂಲಕ ಬರಹದ ರೂಪವನ್ನು ಪಡೆದುಕೊಂಡು ಇಂದೂ ಅದು ಪ್ರಸ್ತುತತೆಯನ್ನು ಪಡೆದಿವೆ. ಹಾಗಾಗಿ ಆಧುನಿಕ ಕಾಲದ ವಿದ್ಯಾರ್ಥಿಗಳಲ್ಲೂ ಇಂತಹ ಸಾಮಾಜಿಕ ಜವಾಬ್ದಾರಿ ಬರಬೇಕಾದರೆ ರಂಗಕಲೆಯು ಸಹಾಯಕವಾಗಲಿದೆ.

ಇನ್ನೊಂದು ಪ್ರಕಾರ ಬೀದಿನಾಟಕ. ಇದು ರಂಗಭೂಮಿಯ ಅತ್ಯಂತ ಪ್ರಭಾವಶಾಲಿ ರೂಪ. ಕಾಲೇಜುಗಳಲ್ಲೂ ರಾಷ್ಟ್ರೀಯ ಸೇವಾ ಯೋಜನೆ, ರೆಡ್‌ಕ್ರಾಸ್ ಘಟಕ, ರೋವರ್ಸ್ ಆಂಡ್ ರೇಂಜರ್ಸ್ ಹೀಗೆ ಹಲವು ಘಟಕಗಳು ತಮ್ಮ ಸುತ್ತಮುತ್ತಲಿನ ಪರಿಸರಗಳಲ್ಲಿ, ಜನನಿಬಿಡ ಪಟ್ಟಣಗಳಲ್ಲಿ ಈಗಿನ ಸಮಾಜಕ್ಕೆ ಅತ್ಯಂತ ಅವಶ್ಯಕವಾದ ತಿಳುವಳಿಕೆಗಳನ್ನು ಅಂದರೆ ಮಾದಕವ್ಯಸನ ನಿರ್ಮೂಲನೆ, ಜನಸಂಖ್ಯಾ ಜಾಗೃತಿ, ಪರಿಸರ ಸಂರಕ್ಷಣೆ, ಜಲಸಂರಕ್ಷಣೆ ಹೀಗೆ ಹತ್ತು ಹಲವು ಸಾಮಾಜಿಕ ಅನಿಷ್ಟಗಳನ್ನು ಬೀದಿನಾಟಕದ ಮೂಲಕ ಪ್ರಸ್ತುತ ಪಡಿಸುವುದನ್ನು ಕಾಣಬಹುದು. ಇದರಿಂದ ಸ್ವತಃ ವಿದ್ಯಾರ್ಥಿಗಳು ಅರಿತುಕೊಂಡು ಅದರಜೊತೆಗೆ ಸಾರ್ವಜನಿಕರನ್ನೂ ಜಾಗೃತಗೊಳಿಸಲು ಸಾಧ್ಯ. ಹೊರದೇಶಗಳ ಶಿಕ್ಷಣ ಪದ್ಧತಿಯನ್ನು ಗಮನಿಸಿದಾಗ ವಿದ್ಯಾರ್ಥಿಗಳು ಕಡ್ಡಾಯವಾಗಿ ಪಠ್ಯದ ಜೊತೆ ಯಾವುದಾದರೂ ಒಂದು ರಂಗಕಲೆಯ ಅಧ್ಯಯನ ಮಾಡಬೇಕಾಗಿದೆ. ಯಾಕೆಂದರೆ ರಂಗಭೂಮಿ ಜೀವನ ಪದ್ಧತಿಯನ್ನು ತಿಳಿಸಿಕೊಡುತ್ತದೆ. ದೈವಾರಾಧನೆಯು ಜನಪದ ರಂಗಭೂಮಿಯಾಗಿದ್ದು, ನಮ್ಮ ನೆಲೆಯ ಭಾಷೆ, ನಂಬಿಕೆ, ಸಂಸ್ಕೃತಿ, ಇತಿಹಾಸವನ್ನು ಉಳಿಸಿಕೊಂಡು ಬರುತ್ತಿರುವಂತಹ ಆರಾಧನಾ ಕಲೆ. ನಶಿಸಿಹೋಗುವ ನಮ್ಮ ನಂಬಿಕೆ ಆಚರಣೆಗಳನ್ನು ಸರಿಯಾಗಿ ಅರಿತು,

ಅಜ್ಞಾನವನ್ನು ಅಳಿಸಿ, ಹಿತವಾದುದನ್ನು ಆಚರಿಸಿಕೊಂಡು ಹೋಗುವುದು ಯುವಪೀಳಿಗೆಯ ಕರ್ತವ್ಯವಾಗಿದೆ.

**ಸಮಾರೋಪ:**

ಆಧುನಿಕ ತಂತ್ರಜ್ಞಾನದ ಜಗತ್ತಿನಲ್ಲಿ ಬೆಳೆದು ಬರುತ್ತಿರುವ ಜೆನ್–ಜೀ (Gen–Z) ಎಂಬ ಹೆಸರಿನಿಂದ ಕರೆಯಲ್ಪಡುವ ಇಂದಿನ ಯುವಶಕ್ತಿಗಳು ವಿಕಸಿತ ಭಾರತ 2047ರ ಕನಸನ್ನು ನನಸು ಮಾಡಬೇಕಾದರೆ ಸುಧಾರಿತ ಸಮಾಜವನ್ನು ಕಟ್ಟಬೇಕಾಗಿದೆ. ‘‘ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ’’ ಎಂಬ ನುಡಿಯಂತೆ ನಮ್ಮ ಹಿರಿಯರು ಕಟ್ಟಿಕೊಟ್ಟ ಕಲೆಯನ್ನು ತಿಳಿಹೇಳುವ ಪ್ರಕ್ರಿಯೆ ವಿದ್ಯಾರ್ಥಿ ಜೀವನದಲ್ಲೇ ನಡೆಯಬೇಕು. ಅದು ರಂಗಭೂಮಿಯಿಂದಲೂ ಸಾಧ್ಯ ಎನ್ನಬಹುದು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು, ಸಕಾರಾತ್ಮಕ ಬದಲಾವಣೆಗಳನ್ನು ತರಲು ರಂಗಭೂಮಿಯು ಸಹಾಯಕವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಮರುಳಸಿದ್ಧಪ್ಪ ಕೆ., (2003), ಒಡನಾಟ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.